# <u>ಆರೇನು ಮಾಡುವರು ತಾ ಪಾಪಿಯಾದರೆ</u>

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Note:** This song is similar to the song – "Aarenu Maduvaru Aarindale - ಆರೇನ ಮಾಡುವರು ಆರಿಂದಲೇನಹುದು - Version 1".
3. **Note:** This song is listed separately as few wordings / lines / stanzas are different. Also, this is mentioned in the standard book referred above. Researchers have to give further information on this song.
4. **Note:** Another observation is that the ankitas are different in both the songs. Here, the Ankita is siri purandara vittala and in the other one it is shri purandara vittala.

ರಾಗ: ಮುಖಾರಿ ತಾಳ: ಝಂಪೆ

ಆರೇನು ಮಾಡುವರು ತಾ ಪಾಪಿಯಾದರೆ
ಸಾರಸೋದ್ಭವ ಬರೆದ ಬರಹ ತಪ್ಪದು ಹರಿಯೆ ॥ ಪ ॥

ಊರೆಲ್ಲ ನಂಟರು ಉಣಬಡಿಸುವವರಿಲ್ಲ
ಬಾರೆಂದು ಹತ್ತಿರಕೆ ಕರೆವರಿಲ್ಲ
ಆರೈದು ಎನ್ನ ಸೋದರರೆಂದು ಹೋದರೆ
ದೂರದೊಳೆ ನಿಂತು ನೋಡುವರು ಶ್ರೀ ಹರಿಯೆ ॥ ೧ ॥

ಹಸಿದು ನೆಂಟರ ಮನೆಗೆ ಉಣಲೆಂದು ಹೋದರೆ
ಹಸಿವರಿತು ಉಣಬಡಿಸುವವರ ಕಾಣೆ
ರಸ ದಾಳೆ ಕಬ್ಬೆಂದು ಮೆಲ್ಲಲಿಕೆ ಹೋದರೆ
ವಿಷವಾಗಿ ತೋರುತಿದೆ ಬಾಯ್ಗೆ ಹರಿಯೆ ॥ ೨ ॥

ಮನೆಯ ಮುಂದಿನ ಬಾಳೆ ಎನಗಾಗದೆ ಹೋಯ್ತು
ಏನ ಹೇಳಲಿ ಜಳಿತ ಎನ್ನ ವಿಧಿಯ
ನಿನ್ನ ನಾ ಮೊರೆಹೊಕ್ಕೆ ಕಾಯಬೇಕೆಂದರೆ

ಎನ್ನ ನಡು ನೀರಿನೊಳಗೆ ಕೈ ಬಿಡುವೆ ಹರಿಯೆ     ॥ ೩ ॥

ಮರದ ನೆರಳೆಂದು ನಾ ಮರದಡಿಗೆ ಹೋದರೆ
ಉರಿಯಿಂದ (ಧಗೆ) ಢಗೆ ಬಹಳವಾದುದೆನಗೆ
ಹರಿವ ಜಲವೆಂದು ನಾ ಬಾಯಾರಿ ಹೋದರೆ
ಕೆರೆ ಬಾವಿ ಬತ್ತಿ ಒಣಗಿದುವು ಶ್ರೀ ಹರಿಯೆ     ॥ ೪ ॥

ಕೊಡಲು ಧನವಿಲ್ಲವೈ ನುಡಿವುದಕೆ ಉಸಿರಿಲ್ಲ
ಕಡು ದೈನ್ಯದಿಂದೆನ್ನ ದನಿಗುಂದಿತು
ಬಡವರಧಾರಿ ಸಿರಿ ಪುರಂದರ ವಿಠ್ಠಲನೆ
ಬಿಡಲಾರೆ ನಿನ್ನ ಪಾದವನು ಶ್ರೀ ಹರಿಯೆ     ॥ ೫ ॥

### ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಲೌಕಿಕವನ್ನೇ ನಂಬಿ ನಡೆದರೆ ಅದರಿಂದ ಎಂತಹ ಆಘಾತಗಳನ್ನು ಸಹಿಸಬೇಕಾಗುತ್ತದೆ ಎಂಬ ಮಾತನ್ನು ಈ ಹಾಡಿನಲ್ಲಿ ದಾಸರು ಸ್ವಾನುಭದಿಂದ ಹೇಳಿದಂತಿದೆ.

**ಢಗೆ** = ನೀರಡಿಕೆ

**ಧಗೆ** = ವಿಪರೀತ ತಾಪ, ಝಳ  -- ಇದೇ ಸರಿಯಾದ ಪದವಿರಬೇಕು

**Classification:** Keerthane
**Ankita:** siri purandara vittala
**Location:** NA
**Category:** virakti, jeevana darshana
**Group Words:** Krishna, papa, ooru, bandhu, oota, vidhi, niru, agni, rokka, badava
**Pravachana:** NA
**Explanation:** NA